ದಿನಾಂಕ 28-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಜಿ.ಎಸ್.ಕೆ ವಕೀಲರಿಂದಃ</u>**

1. ನನ್ನ ತಂದೆಯ ಮೂಲ ಊರು ಸಾವೀಕೇರಿ ಗ್ರಾಮ ಎಂದರೆ ಸರಿ. ನನ್ನ ತಂದೆಗೆ ಭರಮಪ್ಪ ಮತ್ತು ಮಂಜಪ್ಪ ಎಂಬ ಇಬ್ಬರು ಸಹೋದರರು. ನನ್ನ ತಂದೆಯ ತಂದೆ ಹೆಸರು ಶಿವಪ್ಪ ಎಂದರೆ ಸರಿ. ಸದರಿ ಗ್ರಾಮದಲ್ಲಿ ನನ್ನ ಅಜ್ಜನ ಹೆಸರಿನಲ್ಲಿ ಜಮೀನುಗಳು ಮತ್ತು ಮನೆಯ ಆಸ್ತಿಗಳು ಇದ್ದವು ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆ ಹೆಸರಿನಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಅಜ್ಜ ಶಿವಪ್ಪನ ಹೆಸರಿನಲ್ಲಿ ಸ ನಂಃ 26 ವಿಸ್ತೀರ್ಣ 2 ಎಕರೆ 33 ಗುಂಟೆ ಜಮೀನು ಇದೆ ಎಂದರೆ ಸರಿ. ಅದೇ ಸರ್ವೇ ನಂಬರ್ ಜಮೀನಿನ ಪೈಕಿ ನನ್ನ ದೊಡ್ಡಪ್ಪ ಭರಮಪ್ಪ ರವರಿಗೆ 1 ಎಕರೆ 32 ಗುಂಟೆ ಜಮೀನು ಇದೆ ಎಂದರೆ ಸರಿ. ಸಾವೀಕೇರಿ ಗ್ರಾಮದಲ್ಲಿ ನನ್ನ ಅಜ್ಜನ ಹೆಸರಿನಲ್ಲಿ ಗ್ರಾಮ ಪಂಚಾಯಿತಿ ಆಸ್ತಿ ಸಂಖ್ಯೆ ವಿಪಿಸಿ 128 ರ ಆಸ್ತಿ ಇದೆ ಎಂದರೆ ಸರಿ. ಸದರಿ ಸ ನಂಃ 26 ರ ಜಮೀನಿನಲ್ಲಿ ನನ್ನ ತಂದೆಗೂ ಹಿಸ್ಸೇಯನ್ನು ನೀಡಲಾಗಿತ್ತು ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಆಪಸಾತ್ ಹಿಸ್ಸೇಯ ಪ್ರಕಾರ ನನ್ನ ತಂದೆಗೂ ಜಮೀನನ್ನು ನೀಡಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹಿಸ್ಸೇಯ ಜಮೀನನ್ನು ಇಂದಿಗೂ ಸಹ ನನ್ನ ತಂದೆ ವ್ಯವಸಾಯ ಮಾಡಿಕೊಂಡು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

2. ವಿಪಿಸಿ ಆಸ್ತಿ ಸಂಃ 128 ರಲ್ಲಿಯೂ ಹಿಸ್ಸೇ ಮಾಡಿ ನನ್ನ ತಂದೆಗೆ ಮನೆಯನ್ನು ನೀಡಲಾಗಿತ್ತು ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ ನನ್ನ ತಂದೆ ಮತ್ತು ಆತನ ಕುಟುಂಬದವರು ವಾಸವಿದ್ದೇವೆ ಎಂದರೆ ಸರಿಯಲ್ಲ. ಅಲ್ಲಿಯೇ ವಾಸವಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ತಾಯಿ 2ನೇ ವಾದಿಯು ರಾಮಾಪುರ ಗ್ರಾಮದವರು ಎಂದರೆ ಸರಿ. ಅವರು ನನ್ನ ತಂದೆಯನ್ನು 20 ವರ್ಷಗಳ ಹಿಂದೆ ವರಿಸಿದ್ದರು ಎಂದರೆ ಸಾಕ್ಷಿಯು 35 ವರ್ಷಗಳ ಹಿಂದೆ ವರಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾವೀಕೇರಿ ಗ್ರಾಮದಲ್ಲಿ ವಾಸಿಸಲು ಆಗದೇ ಇತ್ತೀಚೆಗೆ ನನ್ನ ತಾಯಿಯು ನನ್ನ ತಂದೆಯನ್ನು ರಾಮಾಪುರ ಗ್ರಾಮಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ.

4. ನನ್ನ ತಾಯಿಯು ಮದುವೆ ಆದ ನಂತರ ನಿಂಬಣ್ಣ ಎಂಬ ಮನೆತನಕ್ಕೆ ಸೇರಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮುರಿಗೆಣ್ಣನವರ ಕುಟುಂಬಕ್ಕೆ ಸೇರಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿ ರಾಮಾಪುರ ಗ್ರಾಮಕ್ಕೆ ಬಂದಾಗ ನಿಂಬಣ್ಣನವರ ಎಂಬ ಕುಟುಂಬದವರಿಗೆ ಸೇರಿದ ಮನೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ನಿಂಬಣ್ಣನವರ ಮನೆಯಲ್ಲಿಯೇ ನನ್ನ ತಾಯಿ, ತಂದೆ, ನಾನು ಮತ್ತು ಸಹೋದರಿಯು ಹಲವು ವರ್ಷಗಳವರೆಗೆ ವಾಸವಿದ್ದೆವು ಎಂದರೆ ಸರಿಯಲ್ಲ. ಸದರಿಯವರ ಮನೆಯಲ್ಲಿ ನಾವುಗಳು ವಾಸವಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಿಂಬಣ್ಣನವರ ಕುಟುಂಬಕ್ಕೆ ಸೇರಿದ ವಿರೂಪಾಕ್ಷಪ್ಪ ಮತ್ತು ವೀರಪ್ಪ ಎಂಬ ವ್ಯಕ್ತಿಗಳು ಗ್ರಾಮ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿಯ ಸದಸ್ಯರಾಗಿದ್ದರು ಎಂದರೆ ಸರಿ. ಅವರ ಸದಸ್ಯತ್ವದ ಅವಧಿಯಲ್ಲಿ ದಾವಾ ಆಸ್ತಿ ಸಂಃ 45 ನ್ನು ನನ್ನ ತಂದೆಯು ಮಂಜೂರು ಮಾಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಮೂಲ ದಾವಾ ಆಸ್ತಿಯಾದ 45 ನ್ನು ಗ್ರಾಮ ಪಂಚಾಯಿತಿಯು ನನ್ನ ತಂದೆಗೆ ಮಂಜೂರು ಮಾಡಿತ್ತು. ನನ್ನ ತಂದೆಗೆ ಆಸ್ತಿ ಸಂಃ 45 ನ್ನು ಮಂಜೂರು ಮಾಡುವಾಗಲೇ, ಗ್ರಾಮ ಪಂಚಾಯಿತಿಯು ಪಕ್ಕೀರಪ್ಪ ತಂದೆ ತುಳಜಪ್ಪ ಗಾಯಕವಾಡ, ನಕುಲಪ್ಪ ತಂದೆ ಗುರುಲಿಂಗಪ್ಪ ನಿಂಬಣ್ಣನವರ, ದುರುಗವ್ವ ಕೋಂ ಸಣ್ಣ ದುರುಗಪ್ಪ ಬೇವಿನಹಳ್ಳಿ, ಮೂಕಪ್ಪ ತಂದೆ ಪಕ್ಕೀರಪ್ಪ ಹನಕನಹಳ್ಳಿ ರವರಿಗೆ ಆಸ್ತಿ ಸಂಃ 45/ಬಿ, 45/ಸಿ, 46 ಮತ್ತು

47 ರ ಆಸ್ತಿಗಳನ್ನು ಮಂಜೂರು ಮಾಡಿತ್ತು ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಮಂಜೂರು ಮಾಡಿರುವ ವಿಷಯ ನನಗೆ ತಿಳಿದಿದ್ದರೂ ಮಂಜೂರು ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಪಂಚಾಯಿತಿ ಆಸ್ತಿ ಸಂಃ 44/ಎ ಆಸ್ತಿಯನ್ನು ಸಿದ್ದಪ್ಪ ತಂದೆ ರಾಮಪ್ಪ ನಿಂಬಣ್ಣನವರ ಮತ್ತು ಆಸ್ತಿ ಸಂಃ 44/ಬಿ ಆಸ್ತಿಯನ್ನು ನಾಗಪ್ಪ ತಂದೆ ಪುಟ್ಟಪ್ಪ ನಿಂಬಣ್ಣನವರಿಗೆ ಸರಕಾರವು ಮಂಜೂರು ಮಾಡಿತ್ತು ಎಂದರೆ ಸರಿಯಲ್ಲ. ಸಾಕ್ಷಿಗೆ ವಕೀಲರು  ಆಸ್ತಿ ಸಂಃ 44/ಎ ಮತ್ತು 44/ಬಿ ಆಸ್ತಿಗಳ ಕರ ನಿರ್ಧರಣಾ ಪಟ್ಟಿಯ ದೃಢೀಕೃತ ನಕಲುಗಳನ್ನು ತೋರಿಸಿ ಅವುಗಳು ಕ್ರಮವಾಗಿ ಸಿದ್ದಪ್ಪ ತಂದೆ ರಾಮಪ್ಪ ನಿಂಬಣ್ಣನವರ ಮತ್ತುನಾಗಪ್ಪ ತಂದೆ ಪುಟ್ಟಪ್ಪ ನಿಂಬಣ್ಣನವರ ಹೆಸರುಗಳಲ್ಲಿ ಇವೆ ಎಂದು ಒಪ್ಪಿಕೊಂಡಿದ್ದರಿಂದ ಅವುಗಳನ್ನು ನಿ.ಡಿ-1 ಮತ್ತು 2 ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಲ್ಲಿ ಕ್ರಮ ಸಂಖ್ಯೆ 67 ಮತ್ತು 68 ಎಂದು ಕ್ರಮವಾಗಿ ನಮೂದಿಸಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ನಮೂದುಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆಸ್ತಿ ಸಂಃ 45/ಎ ಮತ್ತು 45/ಎ 1  ಗ್ರಾಮ ಪಂಚಾಯಿತಿ ಆಸ್ತಿಗಳಿಗೆ ಸಂಬಂಧಿಸಿದಂತೆ ಕ್ರಮ ಸಂಖ್ಯೆಯು 69 ಮತ್ತು 70 ಎಂದು ನಮೂದಿಸಲಾಗಿದೆ ಎಂದರೆ ಗೊತ್ತಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ  ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ